ಕರ್ನಾಟಕ ವಿಧಾನಸಭೆ

ಶುಕ್ರವಾರ 2ನೇ ಫೆಬ್ರವರಿ 2007ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣ ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1) ನೂತನ ಸಚಿವರ ಪರಿಚಯ :

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತಿಗಳು): ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಸಚಿವರುಗಳಾಗಿ ಪಮಾಣವಚನ ಸ್ವೀಕಾರ ಮಾಡಿರುವವರ ಬಗ್ಗೆ ಸದನಕ್ಕೆ ತಿಳಿಸಬಯಸುತ್ತೇನೆ ಹಾಗೂ ಆ ಮೂಲಕ ಸದನಕ್ಕೆ ಪರಿಚಯಿಸುತ್ತೇನೆ. ನಮ್ಮ ಬಿಜಾಪುರ ಶಾಸಕರಾದಂಥ ಮಾನ್ಯ ಅಪ್ಪು ಪಟ್ಟಣಶೆಟ್ಟಿಯವರು ಸಚಿವರಾಗಿ ಪಮಾಣವಚನ ಸ್ವೀಕಾರ ಮಾಡಿದ್ದು ಅವರು ಜವಳಿ ಖಾತೆಯನ್ನು ನೋಡಿಕೊಳ್ಳುತ್ತಾರೆ. ಇವರಲ್ಲದೇ ತುಮಕೂರು ಶಾಸಕರಾದಂಥ ಮಾನ್ಯ ಶಿವಣ್ಣನವರು ಕೂಡ ಸಚಿವರಾಗಿ ಪಮಾಣವಚನ ಸ್ವೀಕಾರ ಮಾಡಿದ್ದು ರೇಷ್ಮೆ ಇಲಾಖೆಯನ್ನು ನೋಡಿಕೊಳ್ಳುತ್ತಾರೆಂದು ಸದನಕ್ಕೆ ತಿಳಿಸಿ ಪರಿಚಯಿಸುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಮ್ಮದೊಂದು ನಿಲುವಳಿ ಸೂಚನೆ ಇತ್ತು.

2) ಪ್ರಶ್ನೋತ್ತರ :

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು :

ಅಧ್ಯಕ್ಷರು: ಈಗ ಮೊದಲು ಪಶ್ನೋತ್ತರವನ್ನು ತೆಗೆದುಕೊಳ್ಳುತ್ತೇನೆ. ಅದು ಮೊದಲು ಆಗಲಿ. ಮೊದಲು ಮಾನ್ಯ ಬಸವರಾಜ ರಾಯರೆಡ್ಡಿಯವರ ಪಶ್ನೆಯನ್ನು ಅವರ ಬದಲು ಮಾನ್ಯ ಎಸ್.ಎಸ್. ಪಾಟೀಲ್‌ರವರು ಕೇಳುತ್ತಾರೆ.

ಆತ್ಮಹತ್ಯೆಯಾದ ರೈತರ ಕುಟುಂಬಗಳಿಗೆ ಪರಿಹಾರ ಮತ್ತು ಪುನರ್‌ವಸತಿ ಕಲ್ಪಿಸುವುದು

43(226) ಶ್ರೀ ಬಸವರಾಜ ರಾಯ ರೆಡ್ಡಿ (ಯಲಬುರ್ಗಾ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) 2006 ಜನವರಿಯಿಂದ ಡಿಸೆಂಬರ್ 2006ರ ವರೆಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು) ;

ಆ) ಈ ರೈತ ಕುಟುಂಬಗಳಿಗೆ ಸರ್ಕಾರದಿಂದ ಪರಿಹಾರ ಧನವನ್ನು ಮಂಜೂರು ಮಾಡಲಾಗಿದೆಯೇ (ಜಿಲ್ಲಾವಾರು ವಿವರಗಳನ್ನು ಒದಗಿಸುವುದು) ;

ಇ) ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳ ಪುನರ್ ವಸತಿಗಾಗಿ ತೆಗೆದುಕೊಂಡ ಕ್ರಮವೇನು ?

ಶ್ರೀ ಬಂಡೆಪ್ಪಕಾಶಂಪುರ ಪರವಾಗಿ ಶ್ರೀ ಎಸ್.ಎಸ್. ಪಾಟೀಲ್ (ಮಾನ್ಯ ಕೃಷಿ ಸಚಿವರು) :

ಅ) ದಿನಾಂಕ 1.1.2006 ರಿಂದ 31-12-2006 ಅವಧಿಯಲ್ಲಿ 217 ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿದ್ದು ಇದರ ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಆ) ಇದರ ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲೇ ನೀಡಲಾಗಿದೆ.

ಇ) ಸಾಲದ ಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ತಲಾ 1 ಲಕ್ಷ ರೂ.ಗಳಂತೆ ಪರಿಹಾರವನ್ನು ನೀಡಲಾಗುತ್ತಿದೆ. ಇದರ ಜೊತೆಗೆ ಅತಿ ಹೆಚ್ಚು ಆತ್ಮಹತ್ಯೆ ಪ್ರಕರಣಗಳು ವರದಿಯಾಗಿರುವ ರಾಜ್ಯದ 6 ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಬೆಳಗಾಂ ಹಾಗೂ ಚಿತ್ರದುರ್ಗ ಜಿಲ್ಲೆಗಳ ರೈತರ ಪುನರ್ ವಸತಿಗೆ ಪ್ರಧಾನ ಮಂತ್ರಿಯವರ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ 50 ಲಕ್ಷ ರೂ.ಗಳನ್ನು ನೇರವಾಗಿ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದ್ದು, ಇದರಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬದ ಸದಸ್ಯರ ವಿದ್ಯಾಬ್ಯಾಸ ಹಾಗೂ ವೈದ್ಯಕೀಯ ವೆಚ್ಚಗಳಿಗೆ ತಲಾ 10 ಸಾವಿರ ರೂ.ಗಳನ್ನು ನೀಡಲಾಗುತ್ತಿದೆ.

ANNEXURE-I

District wise information on reported & accepted cases of Farmer sulcide in Karnataka for the period January 2006 to December 2006

Sl. No.	Name of the District	No. of cases reported	No. of cases declared eligible & compensation paid	No. of cases under inquiry
1	Bagalkote	7	3	0
2	Bangalore Rural	4	5	0
3	Bangalore Urban	0	0	0
4	Bidar	16	7	3
5	Hassan	21	12	2
6	Chamarajanagar	2	2	0
7	Haveri	3	0	3
8	Uttara Kannada	5	3	1
9	Dharwad	0	0	0
10	Koppal	17	5	2

11	Mandya	0	0	0
12	Chickmagalore	19	5	12
13	Raichur	3	4	0
14	Tumkur	11	3	6
15	Shimoga	15	5	0
16	Kolar	3	3	1
17	Mysore	0	0	0
18	Udupi	0	0	0
19	Kodagu	12	0	10
20	Belgaum	23	15	2
21	Davangere	9	1	1
22	Bellary	3	2	1
23	Chitradurga	11	10	1
24	Gulbarga	9	0	0
25	Bijapur	11	7	1
26	D. Kannada	4	0	0
27	Gadag	9	7	1
	Total	**217**	**99**	**47**

ಶ್ರೀ ಎಸ್.ಎಸ್. ಪಾಟೀಲ್:–ಮಾನ್ಯ ಅಧ್ಯಕ್ಷರೆ, ಉತ್ತರವನ್ನೇನೋ ಒದಗಿಸಿದ್ದಾರೆ. ಇದರಲ್ಲಿ ಎಷ್ಟು ಜನ ರೈತರು ಸತ್ತಿದ್ದಾರೆ ಎಂದು ಕೇಳಿರುವುದಕ್ಕೆ ಅಂಕಿಸಂಖ್ಯೆಯನ್ನು ಕೊಟ್ಟಿದ್ದಾರೆ. ಆದರೆ ದುರ್ದೈವದಿಂದ ಯಾವುದೋ 6 ಜಿಲ್ಲೆಗಳನ್ನು ಮಾತ ತೆಗೆದುಕೊಳ್ಳುವಂತೆ ಕೇಂದ ಸರ್ಕಾರ ಹೇಳಿರುವ ಕಾರಣ ಆ 6 ಜಿಲ್ಲೆಗಳನ್ನು ಮಾತ ಸೇರಿಸುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ಇವರು ಈ ರೀತ ಮಾಡಿರುವುದರಿಂದಲೇ ಈಗ ನನ್ನ ತಾಲ್ಲೂಕಿನಲ್ಲಿಯೇ ಸುಮಾರು 3 ಜನ ರೈತರು ಸತ್ತರು. ಏಕೆಂದರೆ ಎಲ್ಲಿ ರೈತರು ಹೆಚ್ಚು ಸಾಯುತ್ತಾರೆ ಅಲ್ಲಿ ಪ್ಯಾಕೇಜ್‌ನ್ನು ನೀವು ಮಾಡುತ್ತೀರಿ. ಇದರಲ್ಲಿ ಬಹಳ ದೊಡ್ಡ ತಪ್ಪಾಗಿದೆ. ನಿಜವಾಗಿಯೂ ಎಲ್ಲಿ ಬರಗಾಲವಿದೆ, ಎಲ್ಲಿ ತೊಂದರೆ ಇದೆ, ಎಲ್ಲಿ ರೈತರಿಗೆ ಹೆಚ್ಚು ಕಷ್ಟವಾಗಿದೆ ಅವರಿಗೆ ಮಾತ ಪ್ಯಾಕೇಜ್‌ನ್ನು ಮಾಡಬೇಕು. ಕೇಂದ ಸರ್ಕಾರ ಈ ರೀತಿ ಮಾಡಿದೆ ಎಂದು ಹೇಳಿ ನೀವೂ ಕೂಡ ಅದೇ ರೀತ ಮಾಡಿದರೆ ರೈತರಿಗೆ ಪ್ರೋತ್ಸಾಹ ಎಲ್ಲಿ ಕೊಟ್ಟಂತಾಗುತ್ತದೆ. ಎಲ್ಲಿ ಬರಗಾಲವಿದೆ ಅಲ್ಲಿಗೆ ಅವರು ಪ್ಯಾಕೇಜ್‌ನ್ನು ಮಾಡುತ್ತಿಲ್ಲ. ಆ ಕಾರಣದಿಂದ ಎಲ್ಲಿ ಬರಗಾಲವಿದೆ, ಎಲ್ಲಿ ಮೊದಲಿನಿಂದಲೂ ಹೆಚ್ಚು ತೊಂದರೆಯಿಂದ ರೈತರು ಕಷ್ಟದಲ್ಲಿದ್ದಾರೆ, ಅಲ್ಲಿಗೆಲ್ಲಾ ಪ್ಯಾಕೇಜ್‌ನ್ನು ಮಾಡುತ್ತೀರಾ ಎಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಬಂಡೆಪ್ಪ ಕಾಶ್ಯಂಪೂರ್(ಕೃಷಿ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಪ್ಯಾಕೇಜ್ ಬಗ್ಗೆ ಹೇಳಿದ್ದಾರೆ, ಅದನ್ನು ನಾವು ಮಾಡಿದ್ದಲ್ಲ. ಇದನ್ನು ಕೇಂದ್ರ ಸರ್ಕಾರದವರು ಮಾಡಿದ್ದು. ಆ ಮೀಟಿಂಗ್‌ಗೆ ನಾನು ಹೋಗಿದ್ದಾಗ ಕೇಂದ್ರ ಸರ್ಕಾರದ ಕೃಷಿ ಸಚಿವರಾದ ಮಾನ್ಯ ಶರದ್ ಪವಾರ್ ಜೊತೆ ಮಾತನಾಡಿದ್ದೇನೆ. ಅವರ ಜೊತೆ ಮಾತನಾಡುವಾಗ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ರೈತರ ಆತ್ಮಹತ್ಯೆ ಪ್ರಕರಣಗಳು ನಡೆದಿವೆ, ಹೀಗಿರುವಾಗ ನೀವು ಕೇವಲ 6 ಜಿಲ್ಲೆಗಳನ್ನು ಮಾತ್ರ ಯಾವ ರೀತಿಯಲ್ಲಿ ಪ್ಯಾಕೇಜ್‌ಗೆ ತೆಗೆದುಕೊಂಡಿರಿ ಎಂದು ಕೇಳಿದಾಗ ಅವರು 2001 ರ ಪ್ರಕರಣಗಳನ್ನು ತೆಗೆದುಕೊಂಡು, ಇತ್ತೀಚೆಗೆ ಆದಂಥ ಪ್ರಕರಣಗಳನ್ನು ಕೂಡ ನೋಡಿ, ಆ ಒಂದು ನಿಟ್ಟಿನಲ್ಲಿ ಒಂದೊಂದು ಜಿಲ್ಲೆಯಲ್ಲಿ ಮಿನಿಮಮ್ 10 ರೈತರ ಆತ್ಮಹತ್ಯೆ ಆಗಿರುವಂಥ ಕೇಸ್‌ಗಳನ್ನು ತೆಗೆದುಕೊಂಡು, ಈ 6 ಜಿಲ್ಲೆಗಳನ್ನು ಸೆಲೆಕ್ಟ್ ಮಾಡಿ, ಈ ಒಂದು ವಿಶೇಷ ಪ್ಯಾಕೇಜ್‌ನ್ನು ಕೇಂದ್ರ ಸರ್ಕಾರದವರು ಮಾಡಿಕೊಟ್ಟಿದ್ದಾರೆ. ಆ ಪ್ಯಾಕೇಜ್‌ನಲ್ಲಿ ತಮಗೆ ಹೇಳಬೇಕೆಂದರೆ ನಾವು ಆರು ಜಿಲ್ಲೆಗಳಿಗಿಂತ ಹೆಚ್ಚಿಗೆ ಮಾಡಬೇಕೆಂದು ಹೇಳಿದ್ದೇವೆ. ನಮ್ಮ ಬೀದರ್‌ನ ಒಂದು ಭಾಗಕ್ಕೆ ಖುದ್ದಾಗಿ ಸೋನಿಯಾಗಾಂಧಿಯವರೇ ಭೇಟಿ ಮಾಡಿದಂಥ ಸನ್ನಿವೇಶದ ಬಗ್ಗೆ ಕೂಡ ನಾನು ಕೇಂದ್ರ ಕೃಷಿ ಸಚಿವರಿಗೆ ಹೇಳಿದ್ದೇನೆ. ಇದೊಂದೇ ಅಲ್ಲ. ಉತ್ತರ ಕರ್ನಾಟಕದ ಹಲವಾರು ಭಾಗಗಳಲ್ಲಿ ಬಹಳಷ್ಟು ಜಿಲ್ಲೆಗಳಲ್ಲಿ ರೈತರ ಆತ್ಮಹತ್ಯೆ ಆಗಿದೆ ಮತ್ತು ಬರಗಾಲವಿದೆ ಎಂದು ತಿಳಿಸಿದರೂ ಕೂಡ ಅವರು ಅವರದ್ದೇ ಆದಂಥ ಒಂದು ಕ್ಯಾಲುಕುಲೇಶನ್ ಮಾಡಿ ಈ 6 ಜಿಲ್ಲೆಗಳನ್ನು ಸೆಲೆಕ್ಟ್ ಮಾಡಿದರು. ಈ 6 ಜಿಲ್ಲೆಗಳನ್ನು ಸೆಲೆಕ್ಟ್ ಮಾಡಿದಾಗ ನಾವು ನಮ್ಮ ರಾಜ್ಯ ಸರ್ಕಾರದ ಪರವಾಗಿ ಒಂದು ಪ್ಯಾಕೇಜ್‌ಗೋಸ್ಕರ 6903 ಕೋಟಿ ರೂಪಾಯಿಗಳನ್ನು ಕೇಳಿದ್ದೆವು. ಆದರೆ ಅವರು 2689 ಕೋಟಿ ರೂಪಾಯಿಗಳನ್ನು ಹಲವಾರು ಇಲಾಖೆಗಳಿಗೆ ಹಲವಾರು ಯೋಜನೆಗಳಡಿಯಲ್ಲಿ ಸ್ಯಾಂಕ್ಷನ್ ಮಾಡಿಕೊಟ್ಟಿದ್ದಾರೆ. ನಿನ್ನೆಯ ದಿವಸ ಕೂಡ ಕೆಲವಾರು ಸದಸ್ಯರು ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡುತ್ತಾ ಪ್ರಧಾನ ಮಂತ್ರಿಗಳ ಪ್ಯಾಕೇಜ್‌ನಲ್ಲಿ ಹಿಂದೆ ಬಹಳಷ್ಟು ದುಡ್ಡು ಬಂದಿತ್ತಲ್ಲಾ ಅದು ಏನಾಗದೆ ಎಂದು ಕೇಳಿದರು. ಇವೊತ್ತು ಇದರಲ್ಲಿ ಭಾರತ ಸರ್ಕಾರದ ಸ್ಯಾಂಕ್ಷನ್ ಗ್ರಾಂಟ್ 1568 ಕೋಟಿ ರೂಪಾಯಿಗಳು. ಇದಲ್ಲದೇ ಲೋನ್ ಮುಖಾಂತರ ಕೇಂದ್ರ ಸರ್ಕಾರದವರು 1121 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ಇದನ್ನೂ ಕೂಡ ಮೂರು ವರ್ಷಕ್ಕೆ ಕೊಡುತ್ತಾರೆ. ಈ ಹಣವನ್ನು ಒಂದೇ ವರ್ಷದಲ್ಲಿ ಕೊಡುವುದಲ್ಲ. ಈ ಮೂರು ವರ್ಷದ್ದನ್ನೂ ನಾವು ಲೆಕ್ಕ ಹಾಕಿದರೆ, ಅಂದರೆ ಗ್ರಾಂಟ್ ಮತ್ತು ಲೋನ್ ಮೊತ್ತಗಳನ್ನು ಸೇರಿಸಿ ನಾವು ಲೆಕ್ಕ ಹಾಕಿದರೆ ಸುಮಾರು 2699 ಕೋಟಿ

ರೂಪಾಯಿಗಳಾಗುತ್ತದೆ. ಇದು ಮೂರು ವರ್ಷಕ್ಕೆ ಸೇರಿರುವುದರಿಂದ ಆ ಪಕಾರ ಇದನ್ನು ನಾವು ಡಿವೈಡ್ ಮಾಡಬೇಕು. ನನ್ನ ಇಲಾಖೆಯಲ್ಲಿಯೇ ತೆಗೆದುಕೊಂಡರೆ, ಯಾವ ರೀತಿ ಕೆಲಸವಾಗುತ್ತಿದೆ ಎಂದು ಹೇಳುತ್ತೇನೆ. ಇವೊತ್ತು ಡಿಪ್ ಇರಿಗೇಶನ್‌ನಲ್ಲಿ ಕೇವಲ 8 ಕೋಟಿ ರೂಪಾಯಿಗಳಷ್ಟೇ ನಮಗೆ ಬಂದಿರುವುದು. ಇದಲ್ಲದೇ ಹಲವಾರು ಇಲಾಖೆಗಳಲ್ಲಿ ಸ್ವಲ್ಪ ಸ್ವಲ್ಪ ದುಡ್ಡು ಬಂದಿದೆ. ಹೀಗಾಗಿ ಕೇವಲ 6 ಜಿಲ್ಲೆಗಳನಲ್ಲದೇ ಇನ್ನೂ 13 ಜಿಲ್ಲೆಗಳನ್ನೂ ಪ್ಯಾಕೇಜ್‌ನಲ್ಲಿ ಸೇರಿಸಬೇಕೆಂದು ಮಾನ್ಯ ಮುಖ್ಯಮಂತಿಗಳ ನೇತೃತ್ವದಲ್ಲಿ ನಿಯೋಗ ಹೋಗಿ ಕೇಂದ್ರ ಸರ್ಕಾರದ ಸಚಿವರಿಗೆ ಈಗಾಗಲೇ ನಾವು ಮನವಿಯನ್ನು ಕೊಟ್ಟಿದ್ದೇವೆ. ಅವರು ಅದಕ್ಕೆ ಮೊದಲನೆಯ ಹಂತದಲ್ಲಿ 6 ಜಿಲ್ಲೆಗಳನ್ನು ತೆಗೆದುಕೊಳ್ಳುತ್ತಿದ್ದೇವೆ, ಮುಂದಿನ ದಿನಗಳಲ್ಲಿ ನಾವು ನಿಮ್ಮ ಮನವಿಯನ್ನು ಕನ್ಸಿಡರ್ ಮಾಡುತ್ತೇವೆ ಎನ್ನುವ ನಿಟ್ಟಿನಲ್ಲಿ ಹೇಳಿದ್ದಾರೆ.

ಶೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ಸರ್ಕಾರ ಒದಗಿಸಿರುವ ಲಿಖಿತ ಉತ್ತರದಲ್ಲಿ ಒಂದು ತಪ್ಪಾಗಿದೆ. ದಯವಿಟ್ಟು ತಿದ್ದುಪಡಿ ಮಾಡಿಕೊಳ್ಳಬೇಕು. ರಿಪೋರ್ಟ್ ಆದಂಥ ಕೇಸ್‌ಗಿಂತ ಪರಿಹಾರ ಡಿಕ್ಲೇರ್ ಮಾಡಿದ ಕೇಸ್ ಜಾಸ್ತಿ ಇದೆ. ನೀವು ಬೇಕಾದರೆ ನೋಡಬಹುದು. ಬೆಂಗಳೂರು ರೂರಲ್‌ನಲ್ಲಿ 4 ಕೇಸ್ ರಿಪೋರ್ಟ್ ಆಗಿದೆ. ಆದರೆ 5 ಕೇಸ್‌ಗೆ ಇವರು ಪರಿಹಾರ ಕೊಟ್ಟಿದ್ದೇವೆಂದು ಉತ್ತರದಲ್ಲಿ ತೋರಿಸಿದ್ದಾರೆ. ಅದನ್ನು ಯಾರಿಗೆ ಕೊಟ್ಟಿದ್ದಾರೆ ಯಾವ ರೀತಿ ಕೊಟ್ಟಿದ್ದಾರೆ ಎಂಬುದನ್ನು ನೋಡಬೇಕು.

ರಾಯಚೂರಿನಲ್ಲಿ ಮೂರು ಕೇಸ್ ರಿಪೋರ್ಟ್ ಆಗಿದೆ, ನಾಲ್ಕು ಕೇಸ್‌ಗೆ compensation ಕೊಟ್ಟಿದ್ದೇವೆ ಎಂದು ಕೊಟ್ಟಿದ್ದಾರೆ. ಅದು ತಪ್ಪಾಗಿದ್ದರೆ ಮಾನ್ಯ ಸಚಿವರು ತಿದ್ದುಪಡಿ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ತಪ್ಪು ಮಾಹಿತಿ ದಾಖಲೆಗೆ ಹೋಗುತ್ತದೆ. ಅಂದರೆ ಸಾಯದೆ ಇದ್ದವರಿಗೆಲ್ಲ ಪರಿಹಾರ ಕೊಟ್ಟಿದ್ದೇವೆ ಎಂದು ಆಗುತ್ತದೆ.

ಶೀ ಎಸ್. ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಆ ವಿಚಾರವನ್ನು ನಾನೆ ಕೇಳಬೇಕೆಂದು ಇದ್ದೆ, ಅವರೆ ಕೇಳಿದ್ದಾರೆ. ಇಲ್ಲಿ ಉತ್ತರದಲ್ಲಿ ಕೂಡ ತಪ್ಪಾಗಿದೆ. ಮೂರು ಮಂದಿ ರೈತರು ಸತ್ತಿದ್ದಾರೆ ಎಂದು ಇದ್ದರೆ ನಾಲ್ಕು ಮಂದಿಗೆ ಕೊಡುವುದು. ನಾಲ್ಕು ಮಂದಿ ರೈತರು ಸತ್ತಿದ್ದಾರೆಂದರೆ ಐದು ಮಂದಿಗೆ ಕೊಟ್ಟಿದ್ದಾರೆ. ಇನ್ನು ಕೆಲವು ಕಡೆ ಎಂಟು, ಹತ್ತು, ಹದಿನೈದು ಮಂದಿ ಸತ್ತರೂ ಕೂಡ ಪರಿಹಾರ ಕೊಟ್ಟಿರುವುದು ಮೂರು ಅಥವಾ ನಾಲ್ಕು ಮಂದಿಗೆ ಮಾತ್ರ. ಇದಕ್ಕೆ ಒಂದು Enquiry Committee ಮಾಡಿದ್ದಾರೆ. ರೈತ ಯಾರೂ ಕೂಡ ಯಾವುದೋ ಒಂದು ಕಷ್ಟಕ್ಕೆ ಸಾಲ ಮಾಡಿದ್ದೇನೆಂದು ಸುಳ್ಳು ಸುಳ್ಳು ಹೇಳಿ ಸರ್ಕಾರದ ಹಣ ತೆಗೆದುಕೊಂಡು ಸಾಯುವುದಕ್ಕೆ

ಹೋಗುವುದಿಲ್ಲ. ನಾನು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ, ಮಾನ್ಯ ಜೆ.ಹೆಚ್. ಪಟೇಲ್ ರವರು ಹಾಗೂ ಮಾನ್ಯ ದೇವೇಗೌಡರು ಇದ್ದಾಗ ನಾವು ಹಿಂದೆ ರೈತ ಸತ್ತ ತಕ್ಷಣ ಅವರ ಮನೆಗೆ ಹೋಗಿ ಜಿಲ್ಲಾ ಉಸ್ತುವಾರಿಯಿಂದ ಒಂದು ಲಕ್ಷ ರೂಪಾಯಿ ಪರಿಹಾರ ಕೊಟ್ಟು ಬರುತ್ತಿದ್ದೆವು. ಆದರೆ ದುರ್ದೈವದಿಂದ, ಇವತ್ತು enquire ಮಾಡಿ ಆರು ತಿಂಗಳಿಂದ ಒಂದು ವರ್ಷ, ಎರಡು ವರ್ಷದವರೆಗೆ ನಿಂತಿದೆ. ಆಮೇಲೆ ಅವನದು ಆ ಸಾಲ ಇಲ್ಲ, ಈ ಸಾಲ ಇಲ್ಲ, ಅವನು ಒಕ್ಕಲುತನಕ್ಕೆ ಸಾಲ ತೆಗೆದುಕೊಂಡಿಲ್ಲವೆಂದು ಏನೇನೋ ನೆವ ಹೇಳಿಕೊಂಡು ನಮ್ಮ ತಾಲ್ಲೂಕಿನಲ್ಲಿ ಎಂಟು, ಹತ್ತು ಮಂದಿ ಸತ್ತರೂ ಕೂಡ ಮೂರು, ನಾಲ್ಕು ಮಂದಿಗೆ ಮಾತ್ರ ಪರಿಹಾರ ಕೊಡುತ್ತಿದ್ದೀರಿ. ಆ ಕಾರಣದಿಂದ ರೈತ ಸತ್ತ ಮೇಲೆ enquire ಮಾಡುವುದೇನಿದೆ ಅದನ್ನು ತೆಗೆದು ಹಾಕಿ ತಕ್ಷಣ ಅವನ ಮನೆಗೆ ಹೋಗಿ, ಈಗ ಏನು ಒಂದು ಲಕ್ಷ ರೂಪಾಯಿ ಕೊಡುತ್ತೇವೆಂದು ಹೇಳಿದ್ದೀರಿ, ಅದನ್ನು ಎರಡು ಲಕ್ಷ ರೂಪಾಯಿ ಮಾಡುತ್ತೀರಾ ಎನ್ನುವುದನ್ನು ಹೇಳಬೇಕು. ನಂತರ ಅವರ ಮನೆಯವರಿಗೆ ಇರುವಂತಹ ಸಾಲವನ್ನೆಲ್ಲ ತಕ್ಷಣ ತುಂಬಬೇಕು. ಸಾಲ ಎಂದರೆ ಕೇವಲ ಬ್ಯಾಂಕಿನಿಂದ ತೆಗೆದುಕೊಂಡಿರುವುದನ್ನು ಮಾತ್ರ ನೋಡುತ್ತೀರಿ. ಇವತ್ತು ಅವರು ಕೈಸಾಲ ಮಾಡಿದ್ದಾರೆ, ಅದರಿಂದ ಕೂಡ ಅವರು ಸಾಯುತ್ತಿದ್ದಾರೆ. ಈಗ ಬ್ಯಾಂಕ್‌ನಲ್ಲಿ ಸಾಲ ಹುಟ್ಟುವುದಿಲ್ಲ. ನಾಲ್ಕು ರೂಪಾಯಿ ಐದು ರೂಪಾಯಿ ಬಡ್ಡಿಯಂತೆ ಕೈಸಾಲ ಮಾಡಿ ಅದಕ್ಕೆ ಹೆಚ್ಚು ಜನ ರೈತರು ಸಾಯುತ್ತಿರುವುದು. ಅದನ್ನು ಕೂಡ ಯಾವ ರೀತಿಯಾಗಿ ನಿಲ್ಲಿಸುತ್ತೀರಿ? ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಹೇಳಬೇಕು.

ಶೀ ಅಮರೇಗೌಡ ಪಾಟೀಲ್ ಬಯ್ಯಾಪುರ್: ಸಾಲವನ್ನು renewal ಮಾಡಿಕೊಂಡಿದ್ದರೂ ಕೂಡ ಪರಿಹಾರ ಕೊಡುವುದಕ್ಕೆ ಬರುವುದಿಲ್ಲವೆಂದು ಅಧಿಕಾರಿಗಳು application reject ಮಾಡುತ್ತಿದ್ದಾರೆ. ಇದು ಏನಾಗಿದೆ ಎಂದರೆ ಸರ್ಕಾರ ಕೊಡುವುದಕ್ಕೆ ತಯಾರಾಗಿದ್ದರೂ ಕೂಡ ಅಧಿಕಾರಿಗಳು ತಮ್ಮದೆ ಆದಂತಹ ನೀತಿಯನ್ನು ರೂಪಿಸಿಕೊಂಡು ರೈತರಿಗೆ ಅನ್ಯಾಯ ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಅದನ್ನು ಕೂಡಲೇ ಸರಿಪಡಿಸತಕ್ಕಂಥ ಕೆಲಸವಾಗಬೇಕು.

ಶೀ ಬಿ. ಶಿವರಾಂ: ಮಾನ್ಯ ಅಧ್ಯಕ್ಷರೆ, ಹಾಸನ ಆತ್ಮಹತ್ಯೆ ಪ್ರಕರಣದಲ್ಲಿ ಎರಡನೆ ಸ್ಥಾನಕ್ಕೆ ಬಂದಿದೆ. 21 ಪ್ರಕರಣಗಳಲ್ಲಿ 12 ಪ್ರಕರಣಕ್ಕೆ ತಾವು ಪರಿಹಾರವನ್ನು ಕೊಟ್ಟಿದ್ದೀರಿ. ಇನ್ನು ಎರಡು ಮಾತ್ರ ಬಾಕಿ ಇದೆ ಎಂದು ಹೇಳಿದ್ದೀರಿ. ಉಳಿದ ಪ್ರಕರಣದ ಬಗ್ಗೆ ಏನಾಗಿದೆ ಎನ್ನುವುದು ಸ್ಪಷ್ಟವಾಗಿಲ್ಲ. ಈಗ ನನ್ನ ಸ್ನೇಹಿತರು, Prime Minister package ನಲ್ಲಿ ಬಡ್ಡಿ ಮನ್ನಾ ಎಂದು ಬಂದಿದೆ. ಇವತ್ತಿನವರೆಗೂ ಕೂಡ ಜಿಲ್ಲೆಗಳಲ್ಲಿ ಬ್ಯಾಂಕ್‌ನವರು

ಸಮರ್ಪಕವಾದಂತಹ ಉತ್ತರಗಳನ್ನು ಅಸಲನ್ನು ಕಟ್ಟುವುದಕ್ಕೆ ಕೊಡುತ್ತಿಲ್ಲ. ಅವರು ಏನು ಹೇಳುತ್ತಾರೆಂದರೆ ನಾವು clarification ಕೇಳಿದ್ದೇವೆ, State level nodal bank ನಿಂದ ಸ್ಪಷ್ಟೀಕರಣ ಬರಬೇಕೆಂದು ಹೇಳುತ್ತಿದ್ದಾರೆ ಹೊರತು, ಇವತ್ತಿನವರೆಗೂ ಸರಿಯಾದ ಮಾರ್ಗದರ್ಶನ ಸಿಗದೇ ಅವರು ಯಾವ ಸ್ಥಿತಿಗೆ ತಲುಪುತ್ತಿದ್ದಾರೆ ಎನ್ನುವುದನ್ನು ಯೋಚನೆ ಮಾಡಬೇಕು. ಒಂದು ಕಡೆ ಸಾಲ ಮನ್ನಾ ಮಾಡುತ್ತೇವೆ ಎನ್ನುವ ಬಗ್ಗೆ ಗೊಂದಲ. ಅದೇನೆ ಇರಲಿ, ಅದು ಸಹಕಾರಿ ಕ್ಷೇತ್ರಕ್ಕೆ ಸೀಮಿತವಾಗಿ ಮಾತ ಎಂದು ಸ್ಪಷ್ಟವಾಗಿದೆ. ಆದರೆ ಈ ಬ್ಯಾಂಕ್‌ಗಳಿಗೆ ನೀವು ಸರಿಯಾದಂತಹ ಆದೇಶಗಳನ್ನು ಹೊರಡಿಸಿ, ರೈತರಿಗೆ ಬಡ್ಡಿ ಮನ್ನಾ ಮಾಡಿ ಅಸಲವನ್ನು ಕಟ್ಟಿ reschedule ಮಾಡುವುದಕ್ಕೆ, renewal ಮಾಡುವುದಕ್ಕೆ provision ಮಾಡದೇ ಹೋದರೆ ಇದು ಮುಂದುವರಿಯುತ್ತದೋ ಇಲ್ಲವೋ? ಜೊತೆಗೆ ತಮ್ಮ ಇತರೆ ಯೋಜನೆ ಏನಿವೆ water shedಗೆ ಇರಬಹುದು, ಕೃಷಿ ಯೋಜನೆಗೆ, ಸಣ್ಣ ನೀರಾವರಿಗೆ, ಇಲ್ಲಿವರೆಗೂ ಆ ಯೋಜನೆಗಳಿಗೆ ಮಂಜೂರಾತಿ ದೊರೆತಿಲ್ಲ, ಆ ಯೋಜನೆಗಳನ್ನು ಕೈಗೆತ್ತಿಕೊಂಡಿಲ್ಲ. ಇದೇ ಪರಿಸ್ಥಿತಿ ಮುಂದುವರೆದರೆ, ಬಹುಷ: ಆರು ಜಿಲ್ಲೆಗೆ ಈ ಸ್ಥಿತಿಯಾದರೆ, ನಮ್ಮ ಸ್ನೇಹಿತರು ಬೇರೆ ಜಿಲ್ಲೆಗಳ ಬಗ್ಗೆ ಕೇಳುತ್ತಾರೆ. ಏನಾಗುತ್ತದೆ? ಯೋಜನೆ ಬಂದರೂ ಕೂಡ ಬೆಳಗಾಂ ಮತ್ತು ಹಾಸನ ಸೇರಿದರೂ, ಬೆಳಗಾಂ ಆತ್ಮಹತ್ಯೆಯ ಮೊದಲನೆ ಸ್ಥಾನದಲ್ಲಿ ಇದೆ, ಹಾಸನ ಎರಡನೇ ಸ್ಥಾನದಲ್ಲೆ ಇದೆ. ಇದೆ ಪರಿಸ್ಥಿತಿ ಮುಂದುವರೆದರೆ ಬಹುಷ: ನಿಮ್ಮ Prime Minister package ಕೂಡ ಏನೂ ಉಪಯೋಗಕ್ಕೆ ಬರುವುದಿಲ್ಲ. ಎಲ್ಲಿಯವರೆಗೆ ರಾಜ್ಯ ಸರ್ಕಾರ ಆಸಕ್ತಿ ವಹಿಸಿ ಕೂಡಲೇ ತ್ವರಿತಗತಿಯಿಂದ ಆ ಯೋಜನೆಯನ್ನು ಅನುಷ್ಠಾನಗೊಳಿಸದೇ ಹೋದರೆ ಅದು ನಿರುಪಯುಕ್ತವಾಗುತ್ತದೆ. ಆದ್ದರಿಂದ ಸರ್ಕಾರ ಕೂಡಲೆ ಈ ವಿಚಾರದ ಬಗ್ಗೆ ಗಮನ ಹರಿಸಬೇಕು ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶೀ ಬಂಡೆಪ್ಪ ಕಾಶಂಪೂರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಪಾಟೀಲ್‌ರವರು ಇದರಲ್ಲಿ ವಿಳಂಬವಾಗುತ್ತಿದೆಯೆಂದು ಹೇಳಿದರು. ಹಲವಾರು ಕಡೆ ನಾನೇ ಪತ್ಯಕ್ಷವಾಗಿ ಹೋಗಿ, ಅಲ್ಲಿ ಕುಟುಂಬಗಳನ್ನು ಭೇಟಿ ಮಾಡಿ, ಅಧಿಕಾರಿಗಳ ಜೊತೆ ಮಾತನಾಡಿದಾಗ, ಕೆಲವು ಸಂದರ್ಭದಲ್ಲಿ, postmortem report ಬರುವುದಕ್ಕೆ ಸುಮಾರು ಒಂದು ತಿಂಗಳು ಆದಂತಹ ಸಂದರ್ಭ ಇದೆ. ಅದರ ಜೊತೆಗೆ ಮಾನ್ಯ ಸದಸ್ಯರು ಹೇಳಿದಂತೆ ಆರು ತಿಂಗಳು, ಒಂದು ವರ್ಷ ವಿಳಂಬವಾಗಿದ್ದರೆ ಆ ಬಗ್ಗೆ ನಾನು ಕಮ ತೆಗೆದುಕೊಳ್ಳುತ್ತೇನೆ. ಇದರ ಬಗ್ಗೆ ಆದಷ್ಟು ಬೇಗ settle ಮಾಡಬೇಕೆಂದು ಹೇಳುತ್ತೇನೆ. ಅಲ್ಲದೆ ಪರಿಹಾರವನ್ನು ಎರಡು ಲಕ್ಷ ರೂಪಾಯಿ ಕೊಡಬೇಕೆಂದು ಏನು ಕೇಳಿದ್ದಾರೆ, ಅದರ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ. ಮಾನ್ಯ ಬಯ್ಯಾಪುರ್ ರವರು ಹೇಳಿದಂತಹ ವಿಚಾರದಲ್ಲೂ

ಕೂಡ ನಾನು ಕಮ ತೆಗೆದುಕೊಳ್ಳುತ್ತೇನೆ. ಇನ್ನು ಹಾಸನಕ್ಕೆ ಸಂಬಂಧಪಟ್ಟ ಹಾಗೆ ಬಾಕಿ ಏನಾಗಿದೆ ಎಂದು ಕೇಳಿದರು, ಅದು reject ಆಗಿದೆ. ಇದರಲ್ಲಿ ಕಾಲಂ ಏನಿದೆ, ಅದರಲ್ಲಿ ಮೊದಲನೆಯದು reported, ಎರಡನೆಯದು compensation paid, ಮೂರನೆಯದು enquiry pending ಆಗಿರುವುದು, ಉಳಿದಿರುವುದು reject ಆಗಿರುವುದು. ತಮಗೆ ಗೊತ್ತಿದೆ ಹಿಂದೆ ಇದಕ್ಕೆ ಒಂದು norms ಮಾಡಿ, ಇದು ಯಾವ norms ನಲ್ಲಿ fit ಆಗುತ್ತದೆಂದು ನೋಡುವುದಕ್ಕೆ ಎಂದು AC ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದೆ. ಬಾಕಿ ಕೇಸ್‌ಗಳು reject ಆಗಿದೆ. Prime Minister package ನಲ್ಲಿ interest waiver ಬಗ್ಗೆ ಕೇಳಿದಿರಿ, ಈಗಾಗಲೇ ಇವತ್ತು ಇಡೀ ಆರು ಜಿಲ್ಲೆಗಳಲ್ಲಿ 209 ಕೋಟಿ ರೂಪಾಯಿ interest package ನಲ್ಲಿ ಕೊಡಬೇಕೆಂದು ತೀರ್ಮಾನವಾಗಿದೆ. ಹಲವಾರು cabinet sub committee ಮೀಟಿಂಗ್ ಆಗಿದೆ. ಯಾವುದೇ ಕಾರಣಕ್ಕೂ ಕೇಂದ ಸರ್ಕಾರದಿಂದ Prime Minister package ನಲ್ಲಿ ಬಂದಂತಹ ಹಣವನ್ನು ಕೊಡುವುದಕ್ಕೆ ವಿಳಂಬ ಮಾಡುವುದಿಲ್ಲ. ಪತಿ ಜಿಲ್ಲೆಗೆ 50 ಲಕ್ಷ ರೂಪಾಯಿ Prime Minister relief fund ನಲ್ಲಿ ಹೋಗಿದೆ. ಅದರ ಕೆಲಸ ಕಾರ್ಯಗಳು ನಡೆಯುತ್ತಿವೆ. ಇನ್ನು ಬಾಕಿ ಹಣ ಬರುತ್ತಿದೆ. ನಾವು plan of action ರೂಪಿಸಿಕೊಂಡು ಕೆಲಸ ಮಾಡುತ್ತಿದ್ದೇವೆ.

ಅಧ್ಯಕ್ಷರು: ಈಗ ಸಿದ್ದು ಸವದಿಯವರು ಪಶ್ನೆ ಕೇಳಿ.

ಶೀ ಬಿ. ಶಿವರಾಂ: 50 ಲಕ್ಷ ರೂಪಾಯಿ ಬಿಡುಗಡೆ ಮಾಡಿರುವುದು ಖಾಸಗಿ ಸೇವಾದೇವಿ ಮತ್ತು ಇತರೆ ವೆಚ್ಚಕ್ಕೆ. ಆದರೆ ಬ್ಯಾಂಕಿನ ಬಗ್ಗೆ ನಾನು specific ಆಗಿ ಕೇಳುತ್ತಿದ್ದೇನೆ. ಆ ಬ್ಯಾಂಕಿಗೆ direction ಹೋಗಬೇಕು.

ಅಧ್ಯಕ್ಷರು: ಪಶ್ನೆ ಮುಗಿಸಿದ್ದೇನೆ ಎಂದು ಹೇಳಿದರೂ ಕೂಡ ನೀವು ಉತ್ತರ ಹೇಳುತ್ತಿದ್ದೀರಿ. ಮಂತಿಗಳಿಂದಲೇ ಅರ್ಧ ನಿಧಾನವಾಗುವುದು.

ಕಬ್ಬು ಬೆಳೆಗಾರರಿಗೆ ಯೋಗ್ಯ ಬೆಲೆ ನೀಡುವುದು

47(235) ಶ್ರೀ ಸಿದ್ದು ಸಾವದಿ (ಜಮಖಂಡಿ) : ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ಕಬ್ಬು ಬೆಳೆಯುವ ರೈತರು ಕಷ್ಟದಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಕಬ್ಬು ಬೆಳೆಗಾರರ ಸಮಸ್ಯೆಗಳಿಂದ ಸಮಯಕ್ಕೆ ಸರಿಯಾಗಿ ಕಟಾವು, ನೀರಿನ ತೊಂದರೆ ಮತ್ತು ಉಣ್ಣೆ ರೋಗ ಇವುಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದೇ ;

ಇ) ಬೆಳೆಗಾರರಿಗೆ ಯೋಗ್ಯ ಬೆಲೆ ಪಡೆಯುವಲ್ಲಿ ತೊಂದರೆ ಕೊಡುತ್ತಿರುವ ಕಾರ್ಖಾನೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದೇ ;